**ಕರ್ನಾಟಕ ಸರಕಾರ**

ಸಂ:ಬಿಜಿಎಂ:ಡಿಯುಡಿಸಿ:ಯುಪಿಎಸಿ:ಸಿಆರ್:1:2012-13

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ನಗರ ಬಡತನ ನಿರ್ಮೂಲನಾ ಕೋಶ,
ಬೆಳಗಾವಿ, ದಿನಾಂಕ:05.05.2012.

**ವಿಷಯ:**-ಪುರಸಭೆ ಸವದತ್ತಿ ವ್ಯಾಪ್ತಿಯಲ್ಲಿ 2012-13ನೇ ಸಾಲಿನ ಪುರಸಭೆ ಆದಾಯದಡಿ ಶೇ.7.25 ಮತ್ತು ಶೇ.3ರಡಿ ತೆಗೆದುಕೊಂಡ ಕಾರ್ಯಕ್ರಮ/ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ಕುರಿತು.

**ಓದಿತು:**-1)ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011 ದಿನಾಂಕ:27.02.2012

2)ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011 ದಿನಾಂಕ:27.02.2012

3)ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಸುತ್ತೋಲೆ ಸಂ:ಪೌನಿ:22.75:ಸುತ್ತೋಲೆ:2:2012-13 ದಿನಾಂಕ:24.04.2012

4)ಮುಖ್ಯಾಧಿಕಾರಿ, ಪುರಸಭೆ ಸವದತ್ತಿ ಇವರ ಪತ್ರ ಸಂಖ್ಯೆ: ಸಯಪು:ಪುರಸಭೆ ಅನುದಾನ:ಶೇ.3, ಶೇ.7.25:2012-13 ದಿನಾಂಕ:30.04.2012.

**ಪ್ರಸ್ತಾವನೆ:**

2012-13ನೇ ಸಾಲಿಗೆ ಪುರಸಭೆಯು ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಗಳನ್ವಯ ಬಾಬ್ತುಗಳನ್ನು ಹೊರತುಪಡಿಸಿ ರೂ. 47.08 ಲಕ್ಷಗಳ ಆದಾಯವನ್ನು ಹೊಂದಿರುತ್ತದೆ. ಅದರಂತೆ ಓದಿತು (4)ರನ್ವಯ ಮುಖ್ಯಾಧಿಕಾರಿ, ಪುರಸಭೆ ಸವದತ್ತಿ ಇವರು ಪುರಸಭೆ ಆದಾಯದಲ್ಲಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ರೂ.3.41/-ಲಕ್ಷಗಳಲ್ಲಿ 03 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಒಟ್ಟು ರೂ. 1.41/- ಲಕ್ಷಗಳಲ್ಲಿ 05 ಕಾರ್ಯಕ್ರಮಗಳ ಕ್ರಿಯಾ ಯೋಜನೆ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಅದರಂತೆ ಓದಿತು (1) ಮತ್ತು (2)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿಯಂತೆ ಪರಿಶೀಲಿಸಿದ ನಂತರ ಈ ಕೆಳಗಿನಂತೆ ಶೇ.7.25ರಷ್ಟು ನಗರದ ಇತರೆ ಬಡಜನರ ಕಲ್ಯಾಣ ನಿಧಿಗೆ ರೂ.3.41/-ಲಕ್ಷಗಳಲ್ಲಿ 03 ಕಾರ್ಯಕ್ರಮಗಳಿಗೆ ಹಾಗೂ ಶೇ.3ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ.1.41/-ಲಕ್ಷಗಳಲ್ಲಿ 05 ಕಾರ್ಯಕ್ರಮಗಳ ಕ್ರಿಯಾ ಯೋಜನೆ ಅನುಮೋದನೆಗೆ ಪರಿಗಣಿಸಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ಹೆಸರು | ಫಲಾನುಭವಿಗಳ ಸಂಖ್ಯೆ | ಅಂದಾಜು ಮೊತ್ತ (ರೂ. ಗಳಲ್ಲಿ) |
|---|---|---|---|
| | *2* | *3* | *4* |
| | **ಶೇ.7.25ರ ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು** | | |
| | **ವ್ಯಕ್ತಿ ಸಂಬಧಿತ ಅನೂಕೂಲತೆಗಳು ಶೇ. 40%** | | |
| 1 | ಇತರೆ ಹಿಂದುಳಿದ ವರ್ಗದ ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ನೆರವು | | |
| | ಎಸ್.ಎಸ್.ಎಲ್.ಸಿ | 7 | 14000.00 |
| | ಪಿಯುಸಿ | 5 | 15000.00 |
| 2 | ಇತರೆ ಹಿಂದುಳಿದ ವರ್ಗದ ಅನಿಲ ರಹಿತ ಕುಟುಂಬದವರಿಗೆ ಸರಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಅಡುಗೆ ಅನಿಲ ಸಂಪರ್ಕ ಪಡೆಯಲು ಧನಸಹಾಯ ಒದಗಿಸುವುದು. (ಸಂಪರ್ಕದೊಂದಿಗೆ ಒಂದು ಸಿಲಿಂಡರ್, ಒಂದು ಸ್ಟೌವ್ ಪೂರೈಕೆ) | | 107400.00 |
| | **ಸಮುದಾಯ ಸೌಲಭ್ಯಗಳು ಶೇ. 60%** | | |
| 3 | ಪುರಸಭೆ ವ್ಯಾಪ್ತಿಯಲ್ಲಿಯ 3 ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ನಿರ್ಮಿಸುವುದು. | | 204600.00 |
| | **ಒಟ್ಟು** | | **341000.00** |
| | | | |
| | **ಶೇ.3ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು** | | |
| | **ವ್ಯಕ್ತಿ ಸಂಬಧಿತ ಅನೂಕೂಲತೆಗಳು ಶೇ. 40%** | | |
| 1 | ಅಂಗವಿಕಲ ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ಆರ್ಥಿಕ ನೆರವು ನೀಡುವುದು. | | |
| | ಎಸ್.ಎಸ್.ಎಲ್.ಸಿ | 5 | 10000.00 |
| | ಪಿಯುಸಿ | 2 | 6000.00 |
| 2 | ಎಸ್.ಜೆ.ಎಸ್.ಆರ್.ವೈ ಯೋಜನೆಯಡಿ ಉದ್ದಿಮೆಗಾಗಿ ಸಾಲ ಪಡೆದ ಫಲಾನುಭವಿಗಳಿಗೆ ಸಾಲ ಮರುಪಾವತಿಗಾಗಿ ಗರಿಷ್ಟ ರೂ.20000-00 ಮೀರದಂತೆ ಸಹಾಯಧನ ನೀಡುವುದು. | | 40400.00 |
| | **ಸಮುದಾಯ ಸೌಲಭ್ಯಗಳು ಶೇ. 60%** | | |
| 3 | ವಿಕಲಚೇತನರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ನೀಡುವುದು. | 1 | 15000.00 |
| 4 | ಆರೋಗ್ಯ ಇಲಾಖೆ, ಅಂಧತ್ವ ನಿಯಂತ್ರಣ ಸೊಸೈಟಿಯ ಮೂಲಕ ಅಂಗವಿಕಲ ರೋಗಿಗಳಿಗೆ ನಡೆಸುವ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯ ಶಿಬಿರಗಳಿಗೆ ಆರ್ಥಿಕ ಸಹಾಯ ನೀಡುವುದು. | | 10000.00 |
| 5 | ಆಶ್ರಯ ಬಡಾವಣೆ, ಕೊಳಚೆ ಪ್ರದೇಶಗಳು, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನತೆಗೆ ಸರ್ಕಾರಿ ಆಸ್ಪತ್ರೆ ಮತ್ತು ಸರ್ಕಾರೇತರ ಸಂಸ್ಥೆಗಳ ಸಹಾಯದೊಂದಿಗೆ ಆರೋಗ್ಯ ತಪಾಸಣೆ ಶಿಬಿರ ಹಾಗೂ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸುವುದು. | | 59600.00 |
| | **ಒಟ್ಟು** | | **141000.00** |

## ಆದೇಶ

ಮೇಲಿನ ಪ್ರಸ್ತಾವನೆಯಂತೆ ಪುರಸಭೆ ಸವದತ್ತಿ ವ್ಯಾಪ್ತಿಯಲ್ಲಿ 2012–13ನೇ ಸಾಲಿನ ಪುರಸಭೆ ಆದಾಯದಡಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಯೋಜನೆಯಡಿ ರೂ.3,41,000.00 ಗಳ 03 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಯೋಜನೆಯಡಿ ರೂ.1,41,000.00 ಗಳಲ್ಲಿ 05 ಕಾರ್ಯಕ್ರಮಗಳನ್ನು ಕೈಕೊಳ್ಳಲು ಕ್ರಿಯಾಯೋಜನೆ ಅನುಮೋದನೆ ನೀಡಿ ಓದಿತು (1), (2) ಹಾಗೂ (3)ರ ಸರ್ಕಾರದ ಸುತ್ತೋಲೆಯ ನಿಬಂಧನೆ ಹಾಗೂ ಷರತ್ತುಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

**ಸಹಿ/–**

**(ವಿ. ಅನ್ಬುಕುಮಾರ)**

ಜಿಲ್ಲಾಧಿಕಾರಿಗಳು, ಬೆಳಗಾವಿ

**ಪ್ರತಿ:**ಗೌರವಾದರಗಳೊಂದಿಗೆ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಾದರಪಡಿಸಿದೆ.

**ಪ್ರತಿ:**ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ

**ಪ್ರತಿ:**ಮುಖ್ಯಾಧಿಕಾರಿಗಳು, ಪುರಸಭೆ ಸವದತ್ತಿ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಸಹಿ/–**

ಯೋಜನಾ ನಿರ್ದೇಶಕರು

ಜಿಲ್ಲಾ ನಗರಾಭಿವೃದ್ಧಿ ಕೋಶ,

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ